## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಲಕ್ಷ್ಮೇಶ್ವರ

## ಸಿ.ಸಿ.ನಂ.389/2023

ಶ್ರೀ ದಾವಲಸಾಬ ತಂದೆ ಮಹಬೂಬಸಾಬ ಮಿಯ್ಯಾನವರ
ವಯಾ: 40 ವರ್ಷ, ಸಾ: ಲಕ್ಷ್ಮೇಶ್ವರ, ಜಿ: ಗದಗ.

......ಫಿರ್ಯಾದಿದಾರ

ವಿರುದ್ಧ

ಶ್ರೀ ಪ್ರಶಾಂತ ತಂದೆ ಗುರುನಾಥ ಲಕ್ಕುಂಡಿ
ಸಾ: ಕಲಘಟಗಿ, ತಾ: ಕಲಘಟಗಿ, ಜಿ: ಧಾರವಾಡ.

.......ಆರೋಪಿ

ಆರೋಪಿತರು : ಶ್ರೀ ಪ್ರಶಾಂತ ತಂದೆ ಗುರುನಾಥ ಲಕ್ಕುಂಡಿ
**ಸಾ: ಕಲಘಟಗಿ, ತಾ: ಕಲಘಟಗಿ, ಜಿ: ಧಾರವಾಡ.**

### ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆ

ಪ್ರಶ್ನೆ 1. ಈ ಪ್ರಕರಣದಲ್ಲಿ ಸಾಕ್ಷಿದಾರರ ಸಾಕ್ಷಿ ಹೇಳಿದ್ದು ಕೇಳಿದ್ದಿಯಾ?
ಉತ್ತರ ಕೇಳಿರುತ್ತೇನೆ

ಪ್ರಶ್ನೆ 2. ಪಿಡಬ್ಲೂ-1 ಶ್ರೀ ದಾವಲಸಾಬ ತಂದೆ ಮಹಬೂಬಸಾಬ ಮಿಯ್ಯಾನವರ ಇವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ಆಪಾದಿತ ಮತ್ತು ಫಿರ್ಯಾದಿದಾರರು 3-4 ವರ್ಷಗಳಿಂದ ಪರಿಚಯಸ್ಥರಾಗಿ ಒಳ್ಳೆಯ ಸ್ನೇಹಿತರಾಗಿದ್ದಾಗಿ, ಆ ಕಾರಣದಿಂದಾಗಿ ಆಪಾದಿತನು ತನ್ನ ಮನೆತನದ ಅಡಚಣೆಯ ಸಲುವಾಗಿ ದಿನಾಂಕ 25-04-2022 ರಂದು ರೂ.5,00,000/- ಗಳ ಸಾಲದಲ್ಲಿ ರೂ.2,50,000/- ಗಳನ್ನು ಫೋನ ಪೇ ಮೂಲಕ ರೂ.2,50,000/- ಗಳನ್ನು ಸೈಟ ಖರೀದಿಗಾಗಿ ಇಟ್ಟುಕೊಂಡಿದ್ದ ಹಣದಲ್ಲಿ ನೀಡಿದ್ದಾಗಿ, ಅವರು ಪರತ್ ಕೇಳಿದಾಗ ಕೊಡುತ್ತೇನೆ ಅಂತಾ ಹೇಳಿ ಪಡೆದುಕೊಂಡಿದ್ದು ಇರುತ್ತದೆ ಎಂದು, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃ ಸುಳ್ಳು

ಪ್ರಶ್ನೆ 3. ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ನಂತರ ಫಿರ್ಯಾದಿದಾರರು ಸಾಲ ಮರುಪಾವತಿ ಮಾಡುವಂತೆ ಕೇಳಿದಾಗ ಆಪಾದಿತನು ಇಂದು ನಾಳೆ ಅಂತಾ ದಿನಮೇಕ ಮಾಡುತ್ತಾ ಬಂದು ಕೊನೆಗೆ ದಿನಾಂಕ 15-02-2023 ರಂದು ತನ್ನ ಖಾತೆ ಹೊಂದಿರುವ ಯುನಿಯನ್ ಬ್ಯಾಂಕ್, ನವನಗರ ಹುಬ್ಬಳ್ಳಿ ಶಾಖೆಗೆ ಸೇರಿದ ಚೆಕ್ ನಂ.025553 ದಿನಾಂಕ 15.02.2023 ರಲ್ಲಿ ರೂ.5,00,000/- ಎಂದು

ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 4. ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ಸದರಿ ಚೆಕನ್ನು ಫಿರ್ಯಾದಿದಾರರು ನಗದೀಕರಣಕ್ಕಾಗಿ ತಾವು ಖಾತೆ ಹೊಂದಿರುವ ಎಸ್.ಬಿ.ಐ. ಬ್ಯಾಂಕ್, ಲಕ್ಷ್ಮೇಶ್ವರ ಶಾಖೆಯ ಮುಖಾಂತರ ದಿನಾಂಕ 15-02-2023 ರಂದು ಹಾಜರುಪಡಿಸಿದ್ದಾಗಿ, ದಿನಾಂಕ 16.02.2023 ರಂದು ಖಾತೆಯಲ್ಲಿ ಚೆಕ್ ಮಾನ್ಯವಾಗುವಷ್ಟು ಶಿಲ್ಕು ಇರುವುದಿಲ್ಲ ಅಂತಾ ಮೇಮೊದೊಂದಿಗೆ ಚೆಕನ್ನು ವಾಪಸ್ಸು ನೀಡಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 5. ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ನಂತರ ಫಿರ್ಯಾದಿದಾರರು ವಕೀಲರ ಮುಖಾಂತರ ದಿನಾಂಕ 08.03.2023 ರಂದು ಆಪಾದಿತನ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ ನೋಟಿಸನ್ನು ಕಳುಹಿಸಿದ್ದಾಗಿ, ಅದು ಜಾರಿಯಾಗಿರುವುದಿಲ್ಲ ಎಂದು, ಆದ್ದರಿಂದ ಅದನ್ನು ವ್ಯಾಟ್ಸ್ ಆಫ್ ಮೂಲಕವು ಸಹ ತಲುಪಿಸಿದ್ದು ಇರುತ್ತದೆ ಎಂದು, ಆಪಾದಿತನು ಅವರಿಗೆ ಕೈಗಡ ಹಣವನ್ನು ಮರುಪಾವತಿ ಮಾಡದೇ ಇದಿದ್ದರಿಂದ ಫಿರ್ಯಾದಿಯನ್ನು ಸಲ್ಲಿಸಿರುವುದಾಗಿ, ಆಪಾಧಿತನು ಮೋಸ ಮಾಡುವ ದುರುದ್ದೇಶದಿಂದಲೇ ಈ ಕೃತವನ್ನು ಮಾಡಿರುತ್ತಾನೆಂದು ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-6. ನಿಮ್ಮ ಪರ ಸಾಕ್ಷಿವಿಚಾರಣೆಯನ್ನು ಮಾಡಿಸುತ್ತೀರಾ?

ಉತ್ತರ: ಇಲ್ಲ

ಪ್ರಶ್ನೆ-7: ನೀವು ಮತ್ತೇನಾದರೂ ಹೇಳಬಯಸುವಿರಾ?

ಉತ್ತರ: ಸುಳ್ಳು ಕೇಸು ದಾಖಲಿಸಿರುತ್ತಾರೆ**,** ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಈ ಮೇಲಿನ ಪ್ರಶ್ನೆಗಳನ್ನು ಓದಿ ಹೇಳಿದ ನಂತರ ಅವನು/ ಅವಳು ಕೊಟ್ಟ ಉತ್ತರಗಳನ್ನು ಕೊಟ್ಟಂತೆ ಈ ದಿನ 10.02.2026 ರಂದು ಪಡೆದುಕೊಳ್ಳಲಾಯಿತು)

ದಿ.ನ್ಯಾ ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ